ಕಬ್ಬು ಕಟಾವು ಮುಕ್ತೆದಾರರಿಗೆ ಮುಂಗಡ

287 (603) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):– ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳಗಾವಿ ಜಿಲ್ಲೆಯ ಶ್ರೀ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಳೆದ 5 ವರ್ಷಗಳ ಅವಧಿಯಲ್ಲಿ ಕಬ್ಬು ಕಟಾವು ಮುಕ್ತೆದಾರರಿಗೆ ಎಷ್ಟು ಹಣವನ್ನು ಮುಂಗಡವಾಗಿ ನೀಡಿರುತ್ತಾರೆ ; ಮುಂಗಡ ಹಣ ತೆಗೆದುಕೊಂಡ ಮುಕ್ತಿದಾರರು ಅದೇ ವರ್ಷದಲ್ಲಿ ಬಂದು ಕಾರ್ಖಾನೆ ಕ್ಷೇತ್ರದಲ್ಲಿ ಕಬ್ಬು ಕಟಾವು ಮಾಡಿರುತ್ತಾರೆಯೇ (ವಿವರ ನೀಡುವುದು) ;

ಆ) ಸದರಿ ಮುಂಗಡವಾಗಿ ಹಣ ತೆಗೆದುಕೊಂಡ ಮುಕ್ತೆದಾರರಲ್ಲಿ ಕೆಲವರು ಕಾರ್ಖಾನೆಗೆ ಮೋಸ ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಆ ಹಣ ವಸೂಲಿ ಮಾಡಲು ಕಾರ್ಖಾನೆಯು ಯಾವ ಕ್ರಮ ಕೈಗೊಂಡಿದೆ ; ಅವರಿಂದ ಎಷ್ಟು ಹಣ ವಸೂಲಿ ಮಾಡಿದೆ ; ಹಣ ವಾಪಸ್ ಮಾಡದಿರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು) ;

ಶ್ರೀ ಎಸ್. ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) ಶ್ರೀ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಳೆದ 5 ವರ್ಷಗಳಲ್ಲಿ ಕಬ್ಬು ಕಟಾವು ಮುಕ್ತೆದಾರರಿಗೆ ಹಣ ನೀಡಿರುವ ಮಾಹಿತಿ ಅದೇ ವರ್ಷ ಕೆಲಸ ಮಾಡಿರುವ ಮುಕ್ತೆದಾರರ ಸಂಖ್ಯೆ, ಮಸೂಲಿಯಾದ ಹಣ ಹಾಗೂ ಬರತಕ್ಕ ಬಾಕಿ ಹಣ ಇವುಗಳ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ಹಂಗಾಮು	ಕರಾರು ಮಾಡಿದ ಮುಕ್ತೆದಾರರ ಸಂಖ್ಯೆ	ಒಟ್ಟು ಕೊಡ ಮಾಡಿದ ಮುಂಗಡ ಹಣ	ಕೆಲಸಕ್ಕೆ ಹಾಜರಾದ ಮುಕ್ತೆದಾರರ ಸಂಖ್ಯೆ	ಕೆಲಸದಿಂದ ವಸೂಲಿ ಆದ ಹಣ	ಗೈರು ಹಾಜರಾದ ಮುಕ್ತೆದಾರರ ಸಂಖ್ಯೆ	ರೋಖ ವಸೂಲಿ ಆದ ಹಣ (ಬಡ್ಡಿಸಹಿತ)	ಬರ ಬೇಕಾದ ಬಾಕಿ ಹಣ	ವಸೂಲಿ ಗಾಗಿ ಕೈಗೊಂಡ ಕ್ರಮ	ಷರಾ
1	2006-07	556	51300000	551	50775000	5	558497	ಇಲ್ಲ	-	
2	2007-08	326	21390000	296	20052277	30	1471592	ಇಲ್ಲ	-	
3	2008-09	467	25900000	417	23665074	50	2277080	ಇಲ್ಲ	-	
4	2009-10	496	51260000	437	46110719	59	6099837	ಇಲ್ಲ	-	
5	2010-11	490	92998196	441	84376973	49	8471744	215000	ಫ.ಬಿ.ಎಸ್. ದಾವ ದಾಖಲೆಸಲಾಗಿದೆ.	

ಆ) ಸರ್ಕಾರದ ಗಮನಕ್ಕೆ ಬಂದಿಲ್ಲ, ಆದರೆ, 2006–07 ರಿಂದ 2009–10ರ ಹಂಗಾಮುಗಳವರೆಗೆ ಮುಂಗಡ ಹಣ ಪಡೆದ ಮುಕ್ತೆದಾರರು ಆಯಾ ಹಂಗಾಮುಗಳಲ್ಲಿ ಕೆಲಸ ನಿರ್ವಹಿಸಿ ಮುಂಗಡ ಹಣ ವಾಪಸ್ ಮಾಡಿರುತ್ತಾರೆ. 2010–11ರ ಹಂಗಾಮಿನಲ್ಲಿ ಶ್ರೀ ಆದಿನಾಥ ಪನದೆ ಎಂಬ ಮುಕ್ತೆದಾರರಿಂದ ಮುಂಗಡ ರೂ. 21,500/– ವಸೂಲಾಗಬೇಕಾಗಿದ್ದು, ತತ್ಸಂಬಂಧ ಇವರ ವಿರುದ್ಧ ಬಹುರಾಜ್ಯ ಸಹಕಾರ ಕಾಯ್ದೆ 2002 ರಡಿ ಶ್ರೀ ಸಿ.ಎನ್. ಬದ್ರೀನಾಥ್, ಗೌರವ ಮಧ್ಯಸ್ಥದಾರರು ಇವರ ಮುಂದೆ ದಾವಾ ಸಂಖ್ಯೆ ಎಬಿಎನ್/ಡಿಕೆಎಸ್ಎಸ್ಕೆಎನ್/134/2011–12 ದಿನಾಂಕ 23–07–2011 ರಂದು ದಾಖಲಿಸಲಾಗಿದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುತ್ತಾರೆ.

ಕೃಷ್ಣಾ ಸಹಕಾರ ಸಕ್ಕರೆ ಕಾರ್ಖಾನೆ ಸದಸ್ಯರ ರದ್ದು

288 (604) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ):– ಸಕ್ಕರೆ ಮತ್ತು ತೋಟಗಾರಿಕೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಳಗಾವಿ ಜಿಲ್ಲೆಯ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ಕಳೆದ 10 ವರ್ಷಗಳಲ್ಲಿ ಹೊಸದಾಗಿ ಎಷ್ಟು ಸದಸ್ಯರನ್ನು ನೋಂದಣಿ ಮಾಡಿಕೊಂಡಿದೆ ; ಅದೇ ರೀತಿ 10 ವರ್ಷಗಳಲ್ಲಿ ಎಷ್ಟು ಸದಸ್ಯರ ಸದಸ್ಯತ್ವವನ್ನು ರದ್ದುಗೊಳಿಸಿದೆ ; ರದ್ದುಗೊಳಿಸಿದ್ದಲ್ಲಿ ಕಾರಣಗಳೇನು (ವಿವರ ಒದಗಿಸುವುದು) ;

ಆ) ಕಾರ್ಖಾನೆಯು 10 ವರ್ಷಗಳಲ್ಲಿ ನೋಂದಣಿ ಮಾಡಿದ ಸದಸ್ಯರ ವಿವರ ಹಾಗೂ ರದ್ದುಗೊಳಿಸಿರುವ ಸದಸ್ಯರ ವಿವರ ನೀಡುವುದು ; ರದ್ದುಗೊಳಿಸದಿರುವ ಬಾಕಿ ಉಳಿದಿರುವ ಸದಸ್ಯರೆಲ್ಲರೂ ಕಾರ್ಖಾನೆಗೆ ಕಬ್ಬನ್ನು ಪೂರೈಸುತ್ತಿದ್ದಾರೆಯೆ ; ಹಾಲಿ ಇರುವ ಸದಸ್ಯರಲ್ಲಿ ಕಬ್ಬು ಪೂರೈಸದಿರುವವರ ಮೇಲೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು) ;

ಶ್ರೀ ಎಸ್. ರವೀಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು):–

ಅ) ಕಾರ್ಖಾನೆಯು ಕಳೆದ 10 ವರ್ಷಗಳಲ್ಲಿ ಹೊಸದಾಗಿ ನೋಂದಣಿ ಮಾಡಿಕೊಂಡ ಮತ್ತು ರದ್ದುಗೊಳಿಸಿದ ಸದಸ್ಯರ ವಿವರ ಈ ಕೆಳಗಿನಂತಿದೆ.